2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 133/2018

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಭಾರತಿ | ಪಿಡಬ್ಲೂ-4 |
| ಗಂಡನ ಹೆಸರು | - | ವಸಂತ್ | ಸಿಡಬ್ಲೂ -7 |
| ವಯಸ್ಸು | - | 31 ವರ್ಷ | |
| ಉದ್ಯೋಗ | - | ಕೂಲಿಕೆಲಸ | |
| ವಾಸ ಸ್ಥಳ | - | ಸಿದ್ದರಹಳ್ಳಿ | |

ದಿನಾಂಕಃ 15.12.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಹೇಮಲತಾ ನನ್ನ ತಂಗಿ. ನ್ಯಾಯಾಲಯದಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಹಾಜರುಪಡಿಸಿರುವ ಆರೋಪಿ ಮೃತ ಹೇಮಲತಾಳ ಗಂಡ. ಚಾಸಾ.2 ನನ್ನ ತಮ್ಮ. ಚಾಸಾ.5 ನನ್ನ ದೊಡ್ಡಮ್ಮ. ಚಾಸಾ.6 ನನ್ನ ತಾಯಿ. ಚಾಸಾ.3, 4, ಗೊತ್ತಿಲ್ಲ. ಚಾಸಾ.8, 9, 13, 14 ರವರು ಗೊತ್ತು. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. ನಮ್ಮ ತಂದೆ ತಾಯಿಗೆ ಒಟ್ಟು ಮೂರು ಜನ ಹೆಣ್ಣು ಮಕ್ಕಳು. ಅವರೆಂದರೆ ನಾನು, ಚಾಸಾ.2 ಮತ್ತು ಮೃತ ಹೇಮಲತಾ. ಮದುವೆಯಾದ ಬಳಿಕ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೆನು. ಆದರೆ ನನ್ನ ಗಂಡನೊಂದಿಗೆ ನನಗೆ ಸರಿ ಬರದ ಕಾರಣ ನನ್ನ ಗಂಡನ ಮನೆಯನ್ನು ಬಿಟ್ಟು ನಾನು ಸಿದ್ದರಹಳ್ಳಿಯಲ್ಲಿರುವ ನನ್ನ ತವರು ಮನೆಗೆ ಬಂದು

ವಾಸವಾಗಿದ್ದೇನೆ. ನನ್ನ ತಂಗಿ ಮೃತಪಡುವ 9 ವರ್ಷಗಳ ಹಿಂದೆ ಆಕೆಯ ಮದುವೆಯನ್ನು ಆರೋಪಿಯೊಂದಿಗೆ ನಮ್ಮ ಸಂಪ್ರದಾಯದ ಪ್ರಕಾರ ಹಿರಿಯರು ಒಪ್ಪಿ ಮಾಡಿಕೊಡಲಾಗಿತ್ತು. ಆಕೆಗೆ ಇಬ್ಬರು ಗಂಡು ಮಕ್ಕಳು. ಮದುವೆಯಾದ ಬಳಿಕ ಸ್ವಲ್ಪ ದಿನಗಳ ಕಾಲ ಆರೋಪಿ ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಂಡಿದ್ದನು. ಆದರೆ ನಂತರ ಆತ ಕುಡಿದುಕೊಂಡು ಬಂದು ನಾನು ಚೆನ್ನಾಗಿರಬೇಕು ಎಂದರೆ ನೀನು ಸಾಯಿ, ವಿಷವನ್ನು ಕುಡಿ ಎಂದು ಹೇಳಿ ನನ್ನ ತಂಗಿಗೆ ಹಿಂಸೆ ಕೊಡುತ್ತಿದ್ದನು. ನನ್ನ ತಂಗಿ ಆಕೆಯ ಮಕ್ಕಳೊಂದಿಗೆ ತವರು ಮನೆಗೆ ಬಂದು 2 ರಿಂದ 3 ತಿಂಗಳ ಕಾಲ ಇಲ್ಲಿಯೇ ಉಳಿದುಕೊಳ್ಳುತ್ತಿದ್ದಳು. ಆ ಸಮಯದಲ್ಲಿ ಆರೋಪಿ ಆಕೆಗೆ ಕೊಡುತ್ತಿದ್ದ ಹಿಂಸೆಯ ಬಗ್ಗೆ ನನ್ನ ಬಳಿ ಹೇಳಿಕೊಳ್ಳುತ್ತಿದ್ದಳು. ಆಗ ನಾವು ಆರೋಪಿಯನ್ನು ಕರೆಯಿಸಿ ಬುದ್ಧಿ ಹೇಳುತ್ತಿದ್ದೆವು. ಆಗ ಆರೋಪಿ ಆಕೆಯನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ಕರೆದುಕೊಂಡು ಹೋಗುತ್ತಿದ್ದನು. ಆದರೆ ಪುನಃ ಆಕೆಗೆ ಹಿಂಸೆ ಕೊಡುತ್ತಿದ್ದನು. ಮೃತಪಡುವ 1 ತಿಂಗಳ ಹಿಂದೆ ನನ್ನ ತಂಗಿ ಹೇಮಲತಾ ತನ್ನ ಮಕ್ಕಳೊಂದಿಗೆ ನಮ್ಮ ಮನೆ ಅಂದರೆ ನಮ್ಮ ತವರು ಮನೆಗೆ ಬಂದು ಅಲ್ಲಿಯೇ ಉಳಿದುಕೊಂಡಿದ್ದಳು. ಆಗ ಆರೋಪಿ ನಮ್ಮ ಮನೆಗೆ ಬಂದು ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಹೇಳಿ ನನ್ನ ತಂಗಿ ಮತ್ತು ಆಕೆಯ ಮಕ್ಕಳನ್ನು ಕರೆದುಕೊಂಡು ಹೋದನು. ಆದರೆ ಪುನಃ ಆರೋಪಿ ನನ್ನ ತಂಗಿಯನ್ನು ಚೆನ್ನಾಗಿ ನೋಡಿಕೊಳ್ಳದೇ ಹಿಂಸೆ

ನೀಡಿದ್ದಾನೆ.

3. ನಂತರ 2018 ನೇ ಇಸವಿಯ 6 ನೇ ತಿಂಗಳು ಎಂದು ಹೇಳಿ ಸಾಕ್ಷಿ ನನಗೆ ತಿಂಗಳು ನೆನಪಿಲ್ಲವೆಂದು ಹೇಳಿ ಒಂದು ದಿನ ರಾತ್ರಿ 12.00 ಗಂಟೆ ಸುಮಾರಿಗೆ ಆರೋಪಿ ನನ್ನ ಮೊಬೈಲ್ ಗೆ ಫೋನ್ ಮಾಡಿ ನನ್ನ ತಂಗಿ ಹೇಮಲತಾ ಇಲಿ ಪೇಸ್ಟನ್ನು ತಿಂದಿರುವುದಾಗಿ ಹೇಳಿ ಆಕೆಯನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ತಿಳಿಸಿದನು. ಆಗ ಹೋಗಲು ನಮಗೆ ಯಾವುದೇ ವಾಹನ ಸೌಕರ್ಯವಿಲ್ಲದ ಕಾರಣ ಮಾರನೇ ದಿನ ನಾನು, ನನ್ನ ತಾಯಿ ಮತ್ತು ನನ್ನ ತಮ್ಮ ಆಟೋದಲ್ಲಿ ಚಿಕ್ಕಮಗಳೂರು ಆಸ್ಪತ್ರೆಗೆ ಹೋದೆವು. ಅಲ್ಲಿ ನನ್ನ ತಂಗಿ ಹೇಮಲತಾ ದಾಖಲಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಳು ಮತ್ತು ಆಕೆ ಮಾತನಾಡುವ ಸ್ಥಿತಿಯಲ್ಲಿದ್ದಳು. ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ನನ್ನ ತಂಗಿ 3 ದಿನಗಳ ಕಾಲ ದಾಖಲಾಗಿದ್ದಳು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಆಕೆಯನ್ನು ಹಾಸನದ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಲಾಯಿತು, ನಂತರ ಅಲ್ಲಿಯೂ ಚಿಕಿತ್ಸೆ ಸರಿಹೋಗದ ಕಾರಣ ನನ್ನ ತಂಗಿಯನ್ನು ಹಾಸನದ ಮಂಗಳ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ನನ್ನ ತಂಗಿ ಒಟ್ಟಾಗಿ ಎಲ್ಲಾ ಆಸ್ಪತ್ರೆಗಳಲ್ಲಿ ಒಂದು ತಿಂಗಳು ಚಿಕಿತ್ಸೆಗಾಗಿ ದಾಖಲಾಗಿದ್ದಳು. ನಂತರ ಮಂಗಳ ಆಸ್ಪತ್ರೆಯಲ್ಲಿ ನನ್ನ ತಂಗಿ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಳು. ಅಲ್ಲಿಂದ ಆಕೆಯ ಮೃತದೇಹವನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಯಿತು. ಆಗ ನಾನು, ನನ್ನ ತಾಯಿ

ಮತ್ತು ನನ್ನ ತಮ್ಮ ಸದರಿ ಆಸ್ಪತ್ರೆಗೆ ಹೋದೆವು. ಅಲ್ಲಿಗೆ ಮಲ್ಲಂದೂರು ಪೊಲೀಸರು ಬಂದಿದ್ದರು. ಅವರು ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಆರೋಪಿ ನನ್ನ ತಂಗಿಗೆ ಕೊಡುತ್ತಿದ್ದ ಹಿಂಸೆಯ ಬಗ್ಗೆ ತಿಳಿಸಿ ಹೇಳಿಕೆ ನೀಡಿದ್ದೇನೆ. ನನ್ನ ತಂಗಿ ಇಲಿ ಪೇಸ್ಟನ್ನು ತಿಂದಿದ್ದ ಸಮಯದಲ್ಲಿ ಮನೆಯಲ್ಲಿ ಆಕೆ ಒಬ್ಬಳೇ ಇದ್ದಳು, ಆರೋಪಿ ಆತನ ಅಜ್ಜಿಯ ತಿಥಿ ಕಾರ್ಯಕ್ಕೆ ಪಕ್ಕದ ಊರಿಗೆ ಹೋಗಿದ್ದನು.

4. ಹಾಸನದ ಆಸ್ಪತ್ರೆಯಲ್ಲಿ ಮಲ್ಲಂದೂರು ಪೊಲೀಸರು ನನ್ನನ್ನು ವಿಚಾರಿಸಿದ 2 ದಿನಗಳ ನಂತರ ನನ್ನನ್ನು ಮಲ್ಲಂದೂರು ಪೊಲೀಸ್ ಠಾಣೆಗೆ ಕರೆಸಿ ಆಸ್ಪತ್ರೆಯ ಖರ್ಚನ್ನು ಯಾರು ನೋಡಿಕೊಂಡರು ಎಂದು ಕೇಳಿದರು. ಆಗ ನಾನು ಪೊಲೀಸರಿಗೆ ಆಸ್ಪತ್ರೆಯ ಅರ್ಧ ಖರ್ಚನ್ನು ಆರೋಪಿ ಕೊಟ್ಟಿದ್ದಾಗಿ ಉಳಿದ ಖರ್ಚನ್ನು ನಾವೇ ನೋಡಿಕೊಂಡಿದ್ದಾಗಿ ತಿಳಿಸಿದೆನು. ಆರೋಪಿ ನನ್ನ ತಂಗಿಗೆ ನೀನು ಸಾಯಿ ನೀನು ಸತ್ತರೆ ನಾನು ನೆಮ್ಮದಿಯಾಗಿ ಇರುತ್ತೇನೆ ಎಂದು ಹಿಂಸೆ ಕೊಡುತ್ತಿದ್ದರಿಂದ ನನ್ನ ತಂಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ಆಕೆಯ ಸಾವಿಗೆ ಆರೋಪಿಯೇ ಕಾರಣ.

5. ಸಾಕ್ಷಿಯು ಈಗಾಗಲೇ ನಿಪಿ.3 ಎಂದು ಗುರುತಿಸಲಾಗಿರುವ ಫೋಟೋದಲ್ಲಿ ತನ್ನ ತಂಗಿ ಹೇಮಲತಾಳ ಮೃತದೇಹ ಕಂಡು ಬರುವುದಾಗಿ ನುಡಿದಿರುತ್ತಾರೆ. ನನ್ನ ತಂಗಿ ಮೃತಪಟ್ಟಿದಾಗಿನಿಂದ ಇಲ್ಲಿಯವರೆಗೆ ಆಕೆಯ ಇಬ್ಬರೂ ಗಂಡು

ಮಕ್ಕಳನ್ನು ನಾವೇ ಸಾಕಿಕೊಂಡಿದ್ದೇವೆ ಮತ್ತು ಅವರ ಖರ್ಚು ವೆಚ್ಚಗಳನ್ನು ಭರಿಸುತ್ತಿದ್ದೇವೆ.

(ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಾಕ್ಷಿಯ ಪಾಟೀ ಸವಾಲನ್ನು ರೂ.500/- ಖರ್ಚಿನ ಮೇರೆಗೆ ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.